# IN THE COURT OF THE ADDL. SENIOR CIVIL JUDGE & JMFC., GUBBI

# OS 56/2023

Witness present and duly sworn on : 06-03-2025.

Further Cross Examination: by Counsel for Plaintiffs :

ನಾನು 5 ನೇ ತರಗತಿಯವರೆಗೆ ಓದಿದ್ದೇನೆ . ವಾದಿಗಳಾದ ನಂದಿಶಯ್ಯ , ಶಿವಾನಂದಯ್ಯ ರೇಣುಕಯ್ಯ ರವರ ಸರ್ವೆ ನಂ 21 ಜಮೀನಿಗೆ ದಾವೆ ಸಲ್ಲಿಸಿದ್ದಾರೆ . ಪ್ರತಿವಾದಿ ರಾಮಚಂದ್ರಯ್ಯರವರು ಸರ್ವೆ ನಂ 21 ರಲ್ಲಿ ಇದ್ದಾರೆ . ಸದರಿ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇದೆ. ನನ್ನ ಜಮೀನಿನ ಸರ್ವೆ ನಂಬರ್ 21 . ಅದನ್ನು ತೋರಿಸಲು ನಾನು ನ್ಯಾಯಾಲಯದಲ್ಲಿ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಪಕ್ಕದ ಜಮೀನಿನಲ್ಲಿ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿದ್ದೇನೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದಾರೆ ಎಂದು ಸುಳ್ಳು ಹೇಳಿದ್ದು ಸದರಿ ಆಸ್ತಿಯಲ್ಲಿ ವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸುಂದರಮ್ಮ ನವರು ಇದ್ದಾರೆ . ಪ್ರತಿವಾದಿ ರಾಮಚಂದ್ರಯ್ಯ ಪಕ್ಕ ಪಕ್ಕದವರು . ನನಗೆ ದಾವಾ ಆಸ್ತಿಯ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದರೂ ಸಹ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2018 ರಲ್ಲಿ ಸರ್ವೆ ನಂಬರ್ 20 ಮಂಜೂರಾತಿ ಅರ್ಜಿ ಸಲ್ಲಿಸಿದ್ದಾರೆ . ಸದರಿ ಜಮೀನಿಗೆ ಸಂಬಂಧಿಸಿದಂತೆ ಮಂಜೂರಾತಿ ಅರ್ಜಿ ಸಲ್ಲಿಸದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಚೆಕ್ಕುಬಂದಿಯ ದಕ್ಷಿಣಕ್ಕೆ ಮಲ್ಲೇಶ್ , ಪಶ್ಚಿಮಕ್ಕೆ ಗೊತ್ತಿಲ್ಲ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>Re examination - Nil</u>**

(Typed to my dictation in open court)

R.O.I & A.C.

sd/-

Addl. Senior Civil Judge and
JMFC., Gubbi